ಅಧ್ಯಾಯ ೬

ಭಾರತೀಯ ನಾಗರಿಕತೆ ಆರಂಭ

"ಹರಪ್ಪ, ಸಿಂಧೂ ಅಥವಾ ಸಿಂಧೂ-ಸರಸ್ವತಿ ನಾಗರಿಕತೆ ಎಂದು ವಿವಿಧ ರೀತಿಯಲ್ಲಿ ಕರೆಯುವ ಭಾರತದ ಅತ್ಯಂತ ಪ್ರಾಚೀನ ನಾಗರಿಕತೆಯು ಹಲವು ರೀತಿಯಿಂದ ಗಮನಾರ್ಹವಾಗಿದೆ. ಅದು ಸಮತೋಲನದ ಸಾಮಾಜಿಕ ಜೀವನಲ್ಲಿ ಹೇಗೆ ಸಮತೋಲನದಿಂದ ಬದುಕಬೇಕೆಂಬುದನ್ನು ತೋರಿಸಿದರು. ಈ ನಾಗರಿಕತೆಯಲ್ಲಿ ಶ್ರೀಮಂತರು ಮತ್ತು ಬಡವರ ನಡುವಿನ ವ್ಯತ್ಯಾಸವಿರಲಿಲ್ಲ. ಒಟ್ಟಿನಲ್ಲಿ ಹರಪ್ಪ ನಾಗರಿಕತೆ ಸಾಮಾಜಿಕ ಸನ್ನಿವೇಶವು 'ಶೋಷಣೆ' ಬದಲಾಗಿ ಪರಸ್ಪರ 'ಹೊಂದಾಣಿಕೆ'ಯಿಂದ ಕೂಡಿತ್ತು."

- ಬಿ.ಬಿ.ಲಾಲ್

ಕೆಲವು ಮುಖ್ಯ ಪ್ರಶ್ನೆಗಳು ?

೧. ನಾಗರಿಕತೆ ಎಂದರೇನು?
೨. ಭಾರತೀಯ ಉಪಖಂಡದ ಆರಂಭದ ನಾಗರಿಕತೆ ಯಾವುದು?
೩. ನಾಗರಿಕತೆಯ ಪ್ರಮುಖ ಸಾಧನೆಗಳೇನು?



ಚಿತ್ರ ೬.೧. ಧೋಲಾವಿರಾದ 'ಕ್ಯಾಸಲ್' ಪ್ರದೇಶದ ಉತ್ತರ ಭಾಗದಲ್ಲಿರುವ ದ್ವಾರದ, ಪ್ರವೇಶದ್ವಾರ.

© NCERT not to be republished

ನಾಗರಿಕತೆ ಎಂದರೇನು?

ಅಧ್ಯಾಯ ೪ ರ ಕೊನೆಯಲ್ಲಿ, ಮೊದಲ ಆದಿಮಾನವರ ಗುಂಪುಗಳ ವಸತಿ ತಾಣ, ಕೃಷಿಯಲ್ಲಿ ತೊಡಗಿಸಿಕೊಂಡದ್ದು, ಕೆಲವು ತಂತ್ರಜ್ಞಾನಗಳನ್ನು ಕಂಡುಕೊಂಡು (ಕಟ್ಟಡ ನಿರ್ಮಾಣ, ಲೋಹಶಾಸ್ತ್ರ, ಸಾರಿಗೆ) ವಸ್ತುಗಳ ಅಭಿವೃದ್ಧಿಪಡಿಸುವುದನ್ನು, ಮತ್ತು 'ನಾಗರಿಕತೆಯ' ವಿಕಾಸದ ಕಡೆಗೆ ಸಾಗುವುದನ್ನು ನಾವು ನೋಡಿದ್ದೇವೆ.

ಲೋಹಶಾಸ್ತ್ರ: ಭೂಮಿಯಿಂದ ಲೋಹಗಳನ್ನು ಹೊರತೆಗೆಯುವ, ಅವುಗಳನ್ನು ಶುದ್ಧೀಕರಿಸುವ ಅಥವಾ ಸಂಯೋಜಿಸುವ ತಂತ್ರಗಳು, ಜೊತೆಗೆ ಲೋಹಗಳು ಮತ್ತು ಅವುಗಳ ಗುಣಲಕ್ಷಣಗಳ ವೈಜ್ಞಾನಿಕ ಅಧ್ಯಯನ ಮಾಡುವುದಾಗಿದೆ..

ಹಾಗಾದರೆ ನಾಗರಿಕತೆ ಎಂದರೇನು? ಸಾಮಾನ್ಯವಾಗಿ, ಈ ಪದವನ್ನು ಮಾನವರ ಸಮಾಜದ ಮುಂದುವರಿದ ಹಂತಕ್ಕೆ ಬಳಸಲಾಗುತ್ತಿದೆ. ಖಚಿತವಾಗಿ ಹೇಳುವುದಾದರೆ 'ನಾಗರಿಕತೆ'ಯು ಕನಿಷ್ಠ ಈ ಕೆಳಗಿನ ಗುಣಲಕ್ಷಣಗಳನ್ನು ಹೊಂದಿರಬೇಕು ಎಂದು ನಾವು ಇಲ್ಲಿ ಪರಿಗಣಿಸುತ್ತೇವೆ. ಅಂತವುಗಳನ್ನು ನಾವಿಲ್ಲಿ ನೋಡೋಣ:

- ಸಂಕೀರ್ಣ ಸಮಾಜ ಮತ್ತು ಅದರ ಅನೇಕ ಚಟುವಟಿಕೆಗಳನ್ನು ನಿರ್ವಹಿಸಲು — ಕೆಲವು ರೀತಿಯ **ಸರ್ಕಾರ ಮತ್ತು ಆಡಳಿತ** ವ್ಯವಸ್ಥೆಯನ್ನು ಹೊಂದಿರುತ್ತದೆ.
- **ನಗರೀಕರಣ** — ನಗರ-ಯೋಜನೆ, ನಗರಗಳ ಬೆಳವಣಿಗೆ ಮತ್ತದರ ನಿಯಂತ್ರಣ. ಅದು ಸಹಜವಾಗಿ ನೀರಿನ ನಿರ್ವಹಣೆ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಒಳಗೊಂಡಿರುತ್ತದೆ.
- ವಿವಿಧ **ಕರಕುಶಲ ವಸ್ತುಗಳು** — ಕಚ್ಚಾ ವಸ್ತುಗಳ ತಯಾರಿಕೆ ಮತ್ತು ಮಾರಾಟದ ನಿರ್ವಹಣೆ (ಹರಳು ಅಥವಾ ಲೋಹ), ಮತ್ತು ಸಿದ್ಧಪಡಿಸಿದ ಸರುಕಗಳ ಉತ್ಪಾದನೆ (ಆಭರಣ ಮತ್ತು ಉಪಕರಣಗಳಂತಹ ವಸ್ತುಗಳು).
- **ವ್ಯಾಪಾರ** ಆಂತರಿಕ (ನಗರ ಅಥವಾ ಪ್ರದೇಶದ ಒಳಗೆ) ಮತ್ತು ಬಾಹ್ಯ (ದೂರದ ಪ್ರದೇಶಗಳು ಅಥವಾ ವಿಶ್ವದ ಇತರ ಭಾಗಗಳೊಂದಿಗೆ) - ಎಲ್ಲಾ ರೀತಿಯ ಸರಕುಗಳನ್ನು ವಿನಿಮಯ ಮಾಡಿಕೊಳ್ಳುವುದು
- ಕೆಲವು ರೀತಿಯ **ಬರವಣಿಗೆ** - ದಾಖಲೆಗಳನ್ನು ಇಟ್ಟುಕೊಳ್ಳಲು ಮತ್ತು ಸಂವಹನ ನಡೆಸಲು ಅಗತ್ಯವಿದೆ.
- ಕಲೆ, ವಾಸ್ತುಶಿಲ್ಪ, ಸಾಹಿತ್ಯ, ಮೌಖಿಕ ಸಂಪ್ರದಾಯಗಳು, ಸಾಮಾಜಿಕ ಪದ್ಧತಿಗಳ ಮೂಲಕ ವ್ಯಕ್ತಪಡಿಸಲಾದ ಜೀವನ ಮತ್ತು ಪ್ರಪಂಚದ ಬಗ್ಗೆ **ಸಾಂಸ್ಕೃತಿಕ ವಿಚಾರಗಳು** ರೂಢಿಯಲ್ಲಿದ್ದವು.
- ಒಂದು ಉತ್ಪಾದಕ **ಕೃಷಿ** - ಹಳ್ಳಿಗಳಿಗೆ ಮಾತ್ರವಲ್ಲ, ನಗರಗಳಿಗೂ ಸಾಕಾಗುವಷ್ಟು ಉತ್ಪಾದನೆ.

ಅದರ ಕುರಿತು ಆಲೋಚಿಸಿ

ಮೇಲಿನ ಗುಣಲಕ್ಷಣಗಳಲ್ಲಿ ಯಾವುದು ನಾಗರಿಕತೆಗೆ ಅತ್ಯಂತ ಮೂಲಭೂತವಾಗಿದೆ ಎಂದು ನೀವು ಭಾವಿಸುತ್ತೀರಿ. ಅಂದರೆ ಇತರ ಎಲ್ಲ ಗುಣಲಕ್ಷಣಗಳ ನಾಗರಿಕತೆ ವಿಕಾಸಕ್ಕೆ ಅತ್ಯಗತ್ಯವಾದ ಗುಣಲಕ್ಷಣಗಳೇ?

© NCERT not to be republished


ನಾವೀಗ ಅನ್ವೇಷಿಸೋಣ

ಮೇಲಿನ ಪಟ್ಟಿಯಲ್ಲಿನ ಪ್ರತಿಯೊಂದು ಗುಣಲಕ್ಷಣಗಳ ತಿಳಿಯಲು ಅಂತಹ ನಾಗರಿಕ ಸಮಾಜದಲ್ಲಿ ಅಸ್ತಿತ್ವದಲ್ಲಿರಬಹುದಾದ ವೃತ್ತಿಗಳು ಅಥವಾ ಉದ್ಯೋಗಗಳ ಪಟ್ಟಿಯನ್ನು ನೀವು ಮಾಡಬಹುದೇ?

ಈ ಎಲ್ಲಾ ಗುಣಲಕ್ಷಣಗಳು ಇಂದು ವಿಶ್ವದ ಹೆಚ್ಚಿನ ಸಮಾಜಗಳಲ್ಲಿ ಕಂಡುಬರುತ್ತವೆ ಎಂದು ನೋಡುವುದು ತುಂಬಾ ಸುಲಭ. ಆದರೆ ನಾಗರಿಕತೆಯು ಯಾವಾಗ ಪ್ರಾರಂಭವಾಯಿತು, ಅರ್ಥದಲ್ಲಿ ಎಂಬ ಅರ್ಥದಲ್ಲಿ ನಾವು ಈಗ ವ್ಯಾಖ್ಯಾನಿಸಬಹುದೆ?

ನಾಗರಿಕತೆಯು ಜಗತ್ತಿನ ವಿವಿಧ ಭಾಗಗಳಲ್ಲಿ ಬೇರೆಬೇರೆ ಸಮಯಗಳಲ್ಲಿ ಆರಂಭವಾಯಿತು. ಮೆಸೊಪೊಟೇಮಿಯಾ (ಆಧುನಿಕ ಇರಾಕ್ ಮತ್ತು ಸಿರಿಯಾ) ಎಂದು ಕರೆಯಲ್ಪಡುವ ಪ್ರದೇಶದಲ್ಲಿ ಸುಮಾರು ೬,೦೦೦ ವರ್ಷಗಳ ಹಿಂದೆ ಹುಟ್ಟಿಕೊಂಡಿತು. ಪ್ರಾಚೀನ ಈಜಿಪ್ತಿನ ನಾಗರಿಕತೆಯು ಕೆಲವು ಶತಮಾನಗಳ ನಂತರ ಅದನ್ನು ಅನುಸರಿಸಿತು. ಈ ನಾಗರಿಕತೆ, ಇನ್ನೂ ಕೆಲವು ನಾಗರಿಕತೆಗಳ ಬಗ್ಗೆ ನೀವು ನಂತರದ ತರಗತಿಯಲ್ಲಿ ಕಲಿಯುವಿರಿ. ಹಲವು ವಿಧಗಳಲ್ಲಿ ಆ ಪ್ರಾಚೀನ ನಾಗರಿಕತೆಗಳು ಅಪಾರ ಕೊಡುಗೆಗಳನ್ನು ನೀಡಿದೆ ಇದಿದ್ದರೆ, ಮಾನವರು ಪ್ರಸ್ತುತ ಹಂತದ ವಿಕಸಿತವಾದ ನಾಗರಿಕತೆಯನ್ನು ತಲುಪಲು ಸಾಧ್ಯವಾಗುತ್ತಿರಲಿಲ್ಲ..

ಸದ್ಯಕ್ಕೆ ನಾವು ಭಾರತೀಯ ಉಪಖಂಡವನ್ನು ಮಾತ್ರ ಅಧ್ಯಯನಿಸುತ್ತೇವೆ. ಭಾರತದ ವಾಯುವ್ಯ ಪ್ರದೇಶದಿಂದ ನಮ್ಮ ನಾಗರಿಕತೆಯ ಕಥೆಯು ಪ್ರಾರಂಭವಾಗುತ್ತದೆ.



ಚಿತ್ರ ೬.೨. ಸುಮಾರು ಕ್ರಿ.ಪೂ ೨೬೦೦ ರಿಂದ ೧೯೦೦ರವರೆಗೆ ಸಿಂಧೂ-ಸರಸ್ವತಿ ನಾಗರಿಕತೆಯ ಅವಧಿಯನ್ನು ತೋರಿಸುವ ಕಾಲರೇಖೆ/ಟೈಮ್‌ಲೈನ್.


© NCERT not to be republished

ಗ್ರಾಮದಿಂದ ಪಟ್ಟಣಕ್ಕೆ

ಉಪನದಿ: ದೊಡ್ಡ ನದಿಗೆ (ಅಥವಾ ಸರೋವರಕ್ಕೆ) ಹರಿಯುವ ನದಿ. ಉದಾಹರಣೆಗೆ, ಯಮುನಾ ಗಂಗೆಯ ನದಿಯ ಉಪನದಿಯಾಗಿದೆ.

ಪಂಜಾಬ್ (ಇಂದು ಭಾರತ ಮತ್ತು ಪಾಕಿಸ್ತಾನದ ನಡುವೆ ವಿಭಜಿಸಲ್ಪಟ್ಟಿದೆ) ಮತ್ತು ಸಿಂಧನ (ಈಗ ಪಾಕಿಸ್ತಾನದಲ್ಲಿದೆ) ವಿಶಾಲ ಮೈದಾನಗಳು ಸಿಂಧೂ ನದಿ ಮತ್ತು ಅದರ ಉಪನದಿಗಳಿಂದ ಜಲಾವೃತವಾಗಿವೆ. ಆ ಬಯಲು ಪ್ರದೇಶಗಳನ್ನು ಫಲವತ್ತಾಗಿಸಿತು ಆದ್ದರಿಂದ ಕೃಷಿಗೆ ಅದು ತುಂಬಾ ಅನುಕೂಲಕರವಾಯಿತು. ಇನ್ನೂ ಸ್ವಲ್ಪ ಪೂರ್ವದಲ್ಲಿ, ಕೆಲವು ಸಹಸ್ರಮಾನಗಳ ಹಿಂದೆ ಸರಸ್ವತಿ ಎಂಬ ಮತ್ತೊಂದು ನದಿ ಹಿಮಾಲಯದ ತಪ್ಪಲಿನಿಂದ ಹರಿಯಾಣ, ಪಂಜಾಬ್, ರಾಜಸ್ಥಾನ ಮತ್ತು ಗುಜರಾತನ ಕೆಲವು ಭಾಗಗಳ ಮೂಲಕ ಹರಿಯುತ್ತಿತ್ತು. (ಚಿತ್ರ ೬.೩ ನೋಡಿ). ಈ ಇಡೀ ಪ್ರದೇಶದಲ್ಲಿ ಸುಮಾರು ಕ್ರಿ.ಪೂ ೩೫೦೦ರಿಂದ ಗ್ರಾಮಗಳು ಪಟ್ಟಣಗಳಾಗಿ ಬೆಳೆದವು. ಆ ಪಟ್ಟಣಗಳಲ್ಲಿ ವ್ಯಾಪಾರ ಮತ್ತು ಇತರ ವಿನಿಮಯಗಳು ಹೆಚ್ಚಿದ್ದರಿಂದ ನಗರಗಳಾಗಿ ಬೆಳೆದವು. ಈ ಪರಿವರ್ತನೆಯು ಕ್ರಿ.ಪೂ ೨೬೦೦ ರ ಸಂದರ್ಭದಲ್ಲಿ ಸಂಭವಿಸಿತು

ಪುರಾತತ್ವಶಾಸ್ತ್ರಜ್ಞರು ಈ ನಾಗರಿಕತೆಗೆ 'ಸಿಂಧೂ', 'ಹರಪ್ಪನ್', 'ಇಂದೂಸ್-ಸರಸ್ವತಿ' ಅಥವಾ 'ಸಿಂಧೂ-ಸರಸ್ವತಿ' ನಾಗರಿಕತೆ ಎಂದು ಹಲವಾರು ಹೆಸರುಗಳನ್ನು ನೀಡಿದ್ದಾರೆ. ನಾವು ಈ ಎಲ್ಲಾ ಪದಗಳನ್ನು ಬಳಸುತ್ತೇವೆ. ಇದರ ನಿವಾಸಿಗಳನ್ನು 'ಹರಪ್ಪನ್ನರು' ಎಂದು ಕರೆಯಲಾಗುತ್ತದೆ. ಇದು ವಿಶ್ವದ ಅತ್ಯಂತ ಹಳೆಯ ನಾಗರಿಕತೆಗಳಲ್ಲಿ ಒಂದಾಗಿದೆ.




ಇದನ್ನು ತಪ್ಪಿಸಬೇಡಿ

ಈ ನಾಗರಿಕತೆಯ ನಿವಾಸಿಗಳನ್ನು ಇಂದು 'ಹರಪ್ಪನ್ನರು' ಎಂದು ಏಕೆ ಕರೆಯಲಾಗುತ್ತದೆ? ಏಕೆಂದರೆ ಹರಪ್ಪ ನಗರವು (ಇಂದು ಪಾಕಿಸ್ತಾನದ ಪಂಜಾಬ್ನಲ್ಲಿದೆ) ಒಂದು ಶತಮಾನದ ಹಿಂದೆ ೧೯೨೦-೨೧ ರಲ್ಲಿ ಉತ್ಖನನಗೊಂಡ ಈ ನಾಗರಿಕತೆಗಳಲ್ಲಿ ಮೊದಲನೆಯದಾಗಿತ್ತು.

ಈ ಬೆಳವಣಿಗೆಯನ್ನು 'ಭಾರತದ ಮೊದಲ ನಗರೀಕರಣ' ಎಂದೂ ಕರೆಯಲಾಗುತ್ತದೆ.

© NCERT not to be republished



ಚಿತ್ರ ೬.೩. ಸಿಂಧೂ-ಸರಸ್ವತಿ ನಾಗರಿಕತೆಯ ಕೆಲವು ಪ್ರಮುಖ ಮಾನವರ ವಸತಿ ಸ್ಥಳಗಳ ನಕ್ಷೆ. (ಕಂದು ಬಣ್ಣದಲ್ಲಿರುವ) ಪರ್ವತ ಶ್ರೇಣಿಗಳಿಂದ ರೂಪುಗೊಂಡ ನೈಸರ್ಗಿಕ ಗಡಿಗಳನ್ನು ಗಮನಿಸಿ .

ನಾವೀಗ ಅನ್ವೇಷಿಸೋಣ

ಈ ಸಿಂಧೂ ನಾಗರಿಕತೆಯ ಕೆಲವು ಪ್ರಮುಖ ನಗರಗಳನ್ನು ನಕ್ಷೆಯಲ್ಲಿ ಗುರುತಿಸಲಾಗಿದೆ (ಚಿತ್ರ ೬.೩). ತರಗತಿ ಚಟುವಟಿಕೆಯಾಗಿ, ಮುಂದಿನ ಪುಟದಲ್ಲಿನ ಕೋಷ್ಟಕದಲ್ಲಿ ಈ ನಗರಗಳನ್ನು ಆಧುನಿಕ ರಾಜ್ಯಗಳು ಅಥವಾ ಪ್ರದೇಶಗಳೊಂದಿಗೆ ಹೊಂದಿಸಲು ನೀವು ಪ್ರಯತ್ನಿಸಬಹುದೇ?

© NCERT not to be republished

ಹರಪ್ಪನ್ ನಗರ	ಆಧುನಿಕ ರಾಜ್ಯ / ಪ್ರದೇಶ
ಧೋಲಾವಿರಾ	ಪಂಜಾಬ
ಹರಪ್ಪ	ಗುಜರಾತ
ಕಾಲಿಬಂಗನ್	ಸಿಂಧ
ಮೊಹೆಂಜೊದಾರೊ	ಹರಿಯಾಣ
ರಾಖಿಗರ್ಹಿ	ರಾಜಸ್ಥಾನ

ಸರಸ್ವತಿ ನದಿ

ನಕ್ಷೆಯು (ಪುಟ ೮೯ ರಲ್ಲಿ ಚಿತ್ರ ೬.೩) ಇಂಡುಸ್ (ಅಥವಾ ಸಿಂಧು) ಮತ್ತು ಅದರ ಐದು ಪ್ರಮುಖ ಉಪನದಿಗಳು ನದಿಯನ್ನು ತೋರಿಸುತ್ತದೆ; ಮೊಹೆಂಜೊದಾರೊ ಮತ್ತು ಹರಪ್ಪದಂತಹ ಪ್ರಮುಖ ನಗರಗಳು ಆ ನದಿಗಳ ಉದ್ದಕ್ಕೂ ಬೆಳೆದವು. ಆದರೆ ಸರಸ್ವತಿ ನದಿಯ ಉದ್ದಕ್ಕೂ ಅನೇಕ ತಾಣಗಳಿವೆ, ಇದನ್ನು ಇಂದು ಭಾರತದಲ್ಲಿ 'ಘಗ್ಗರ್' ಮತ್ತು ಪಾಕಿಸ್ತಾನದಲ್ಲಿ 'ಹಕ್ರಾ' (ಆದ್ದರಿಂದ 'ಘಗ್ಗರ್-ಹಕ್ರಾ ನದಿ' ಎಂಬ ಹೆಸರು) ಎಂದು ಕರೆಯಲಾಗುತ್ತದೆ. ಈ ನದಿಯು ಈಗ ಋತುಮಾನಿಕವಾಗಿದೆ, ಏಕೆಂದರೆ ಇದು ಮಳೆಗಾಲದಲ್ಲಿ ಮಾತ್ರ ಹರಿಯುತ್ತದೆ.

ಸರಸ್ವತಿ ನದಿಯನ್ನು ಮೊದಲು ಋಗ್ವೇದದಲ್ಲಿ ಉಲ್ಲೇಖಿಸಲಾಗಿದೆ, ಇದು ಪ್ರಾಚೀನ ಪ್ರಾರ್ಥನೆಗಳ ಸಂಗ್ರಹವಾಗಿದೆ, ಇದರ ಬಗ್ಗೆ ನಾವು ಅಧ್ಯಾಯ ೭ ರಲ್ಲಿ ಓದುತ್ತೇವೆ. ಈ ಪಠ್ಯದಲ್ಲಿ, ಸರಸ್ವತಿಯನ್ನು ದೇವತೆಯಾಗಿ ಮತ್ತು 'ಪರ್ವತದಿಂದ ಸಮುದ್ರಕ್ಕೆ' ಹರಿಯುವ ನದಿಯಾಗಿ ಪೂಜಿಸಲಾಗುತ್ತದೆ. ನಂತರದ ಪಠ್ಯಗಳು ನದಿಯು ಒಣಗುತ್ತಿದೆ ಮತ್ತು ಅಂತಿಮವಾಗಿ ಕಣ್ಮರೆಯಾಗುತ್ತಿದೆ ಎಂದು ವಿವರಿಸುತ್ತವೆ.

ನಗರ ಯೋಜನೆ

ಹರಪ್ಪ ಮತ್ತು ಈಗ ಪಾಕಿಸ್ತಾನದಲ್ಲಿರುವ ಮೊಹೆಂಜೊದಾರೊಗಳು ಸಿಂಧೂ ನಾಗರಿಕತೆಯ ಎರಡು ನಗರಗಳಾಗಿವೆ. ಅವುಗಳನ್ನು ಕಂಡುಹಿಡಿದಿರುವುದ ಒಂದು ಶತಮಾನದ ಹಿಂದೆ ೧೯೨೪ಕ್ಕೆ ಹೋಗುತ್ತದೆ. ಸಿಂಧೂ ಬಯಲು ಪ್ರದೇಶದಲ್ಲಿ ಹಲವಾರು ತಾಣಗಳು ಬೆಳೆದುಬಂದವು. ಅದಕ್ಕಾಗಿಯೇ ಈ ನಾಗರಿಕತೆಯನ್ನು ಆರಂಭದಲ್ಲಿ 'ಸಿಂಧೂ ಕಣಿವೆ ನಾಗರಿಕತೆ' ಎಂದು ಕರೆಯಲಾಗುತ್ತಿತ್ತು.

ನಂತರ, ಇತರ ಪ್ರಮುಖ ನಗರಗಳಾದ ಧೋಲಾವೀರಾ (ಗುಜರಾತ್ನಲ್ಲಿ), ರಾಖಿಗರ್ಹಿ (ಹರಿಯಾಣದಲ್ಲಿ), ಗಣ್ವೇರಿವಾಲಾ (ಪಾಕಿಸ್ತಾನದ ಚೋಲಿಸ್ತಾನ್ ಮರುಭೂಮಿಯಲ್ಲಿ) ಮತ್ತು ನೂರಾರು ಸಣ್ಣ ತಾಣಗಳು (ಗುಜರಾತ್ನ ಲೋಥಲ್ನಂತಹ) ಪತ್ತೆಯಾದವು, ಅವುಗಳಲ್ಲಿ ಕೆಲವು ಉತ್ಖನನಗೊಂಡವು. ಅಂತಹ ಆವಿಷ್ಕಾರಗಳು ಇಂದಿಗೂ ಮುಂದುವರೆದಿವೆ!

© NCERT not to be republished

ಅದರ ಕುರಿತು ಆಲೋಚಿಸಿ

ನೀವು 'ಸಿಂಧೂ ಕಣಿವೆ ನಾಗರಿಕತೆ' ಎಂಬ ಪದವನ್ನು ನೋಡಿರಬಹುದು ಮತ್ತು ನಾವು ಅದನ್ನು ಬಳಸಿಲ್ಲ ಎನ್ನುವುದನ್ನು ಗಮನಿಸಿರಬಹುದು. ನಕ್ಷೆಯನ್ನು ಒಮ್ಮೆ ನೋಡಿದರೆ (ಪುಟ ೮೯ ರಲ್ಲಿನ ಚಿತ್ರ ೬.೩) 'ಕಣಿವೆ' ಎಂಬ ಪದವು ಏಕೆ ಹಳತಾಗಿದೆ ಎಂಬುದನ್ನು ವಿವರಿಸುತ್ತದೆ, ಏಕೆಂದರೆ ನಾಗರಿಕತೆಯು ಸಿಂಧೂ ಪ್ರದೇಶವನ್ನು ಮೀರಿ ವಿಸ್ತರಿಸಿದೆ ಎಂದು ನಮಗೆ ಈಗ ಸ್ಪಷ್ಟವಾಗಿದೆ.

ಸರಸ್ವತಿ ಜಲಾನಯನ ಪ್ರದೇಶವು ರಾಖಿಗರ್ಹಿ ಮತ್ತು ಗಣ್ವೇರಿವಾಲಾ ಎಂಬ ಎರಡು ಪ್ರಮುಖ ನಗರಗಳನ್ನು ಮಾತ್ರವಲ್ಲದೆ ಹಲವಾರು ಸಣ್ಣ ನಗರಗಳನ್ನೂ (ಹರಿಯಾಣದ ಫರ್ಮಾನಾ,ರಾಜಸ್ಥಾನದ ಕಾಲಿಬಂಗನ್) ಮತ್ತು ಕೆಲವು ಪಟ್ಟಣಗಳು (ಭಿರಾನಾ ಮತ್ತು ಬನವಾಲಿ, ಎರಡೂ ಹರಿಯಾಣದಲ್ಲಿವೆ); ವಾಸ್ತವವಾಗಿ, ನಕ್ಷೆ (ಚಿತ್ರ. ಪುಟ ೮೯ ರಲ್ಲಿರುವ ೬.೩) ಆ ಪ್ರದೇಶದಲ್ಲಿನ ತಾಣಗಳ ಹೆಚ್ಚಿನ ಸಾಂದ್ರತೆಯನ್ನು ಸ್ಪಷ್ಟಪಡಿಸುತ್ತದೆ.

ಹರಪ್ಪ ನಾಗರಿಕತೆಯ ದೊಡ್ಡ ನಗರಗಳನ್ನು ನಿಖರ ಯೋಜನೆಗಳ ರೂಪಿಸಿಯೇ ನಿರ್ಮಿಸಲಾಯಿತು. ನಗರವು ವಿಶಾಲವಾದ ಬೀದಿಗಳನ್ನು ಹೊಂದಿತ್ತು (ಪುಟ ೯೨ ರಲ್ಲಿ ಚಿತ್ರ ೬.೪ ಮತ್ತು ೬.೫), ಅವು ಹೆಚ್ಚಾಗಿ ಪ್ರಧಾನ ದಿಕ್ಕುಗಳಿಗೆ/ದಾರಿಗಳ ಕೇಂದ್ರೀಕೃತವಾಗಿದ್ದವು. ಹೆಚ್ಚಿನ ನಗರಗಳು ಕೋಟೆಗಳನ್ನು ಸುತ್ತುವರೆದಿವೆ ಎಂದು ತೋರುತ್ತದೆ ಮತ್ತು ಎರಡು ವಿಭಿನ್ನ ಭಾಗಗಳನ್ನು ಹೊಂದಿತ್ತು -ಸ್ಥಳೀಯ ಅಧಿಕಾರಿಗಳು/ಗಣ್ಯರು ವಾಸಿಸಲು 'ಮೇಲಿನ ಪಟ್ಟಣ', ಸಾಮಾನ್ಯ ಜನರು ವಾಸಿಸಲು 'ಕೆಳಗಿನ ಪಟ್ಟಣ'ವನ್ನು ಬಳಸುತ್ತಿದ್ದರು.

ಕೆಲವು ದೊಡ್ಡ ಕಟ್ಟಡಗಳನ್ನು ಸಾಮೂಹಿಕ ಉದ್ದೇಶಗಳಿಗಾಗಿ ಬಳಸುವಂತೆ ತೋರುತ್ತದೆ. ಉದಾಹರಣೆಗೆ- ಸಾಗಾಣಿಕೆ ಸರಕುಗಳನ್ನು ಸಂಗ್ರಹಿಸುವ ಗೋದಾಮುಗಳು. ವಿವಿಧ ಗಾತ್ರದ ಪ್ರತ್ಯೇಕ ಮನೆಗಳು ಬೀದಿಗಳು ಮತ್ತು ಸಣ್ಣ ಓಣಿಗಳಲ್ಲಿ ಸಾಲು ಕಟ್ಟಡಗಳಿದ್ದವು. ಕುತೂಹಲಕರ ನಿರ್ಮಾಣದ ಗುಣಮಟ್ಟವು ಸಣ್ಣ ಮತ್ತು ದೊಡ್ಡ ಮನೆಗಳಿಗೆ ಒಂದೇ ಆಗಿತ್ತು. ಆ ಎಲ್ಲಾ ಕಟ್ಟಡಗಳು ಸಾಮಾನ್ಯವಾಗಿ ಇಟ್ಟಿಗೆಗಳಿಂದ ಮಾಡಲ್ಪಟ್ಟವು.

ಕೆಲವು ಕಟ್ಟಡಗಳ ರಚನೆಯ ಉದ್ದೇಶವು ಚರ್ಚೆಯ ವಿಷಯವಾಗಿ ಉಳಿದಿದೆ. ಮೊಹೆಂಜೊದಾರೊದಲ್ಲಿನ ಪ್ರಸಿದ್ಧ ಸ್ನಾನದ ಕೊಳ (ಗ್ರೇಟ್ ಬಾತ್) (೯೩ನೇ ಪುಟ ಚಿತ್ರ ೬.೬) ಇದೊಂದು ವಿಸ್ತಾರವಾದ ನೀರಿನ ಹೊಂಡ. ಇದು ಸುಮಾರು ೧೨--೭ ಮೀಟರ್ ಅಳತೆ ಹೊಂದಿದೆ. ಇಟ್ಟಿಗೆಗಳ ಮೇಲೆ ಜಲನಿರೋಧಕ ವಸ್ತುಗಳನ್ನು (ನೈಸರ್ಗಿಕ ಬಿಟುಮೆನ್, ಟಾರಿನ ಒಂದು ರೂಪ) ಅಂಟಿಸಲಾಗಿದೆ.

ಕೋಟೆ: ಸಾಮಾನ್ಯವಾಗಿ ರಕ್ಷಣಾತ್ಮಕ ಉದ್ದೇಶಗಳಿಗಾಗಿ ವಸಾಹತು ಅಥವಾ ನಗರವನ್ನು ಸುತ್ತುವರೆದಿರುವ ಬೃಹತ್ ಗೋಡೆ.

ಅಧಿಕಾರಿಗಳು/ಗಣ್ಯರು: ಈ ಪದವು ಆಡಳಿತಗಾರರು, ಅಧಿಕಾರಿಗಳು, ಪುರೋಹಿತರಂತಹ ಸಮಾಜದ ಉನ್ನತ ವರ್ಗವನ್ನು ಸೂಚಿಸುತ್ತದೆ.

© NCERT not to be republished



(ಮೇಲಿನ) ಚಿತ್ರ ೬.೪.
ಕೆಳ ಪಟ್ಟಣ ಪ್ರದೇಶದ
ಕಾಲಿಬಂಗನ್ (ರಾಜಸ್ಥಾನ)
ನಲ್ಲಿನ ವಿಶಾಲವಾದ ಬೀದಿ.

(ಬಲ) ಚಿತ್ರ ೬.೫.
ಧೋಲಾವಿರಾದಲ್ಲಿನ ವಸತಿ
ಪ್ರದೇಶ, ಲಂಬ ಬೀದಿಗಳನ್ನು
ಹೊಂದಿದ್ದು, ಮಧ್ಯ
ಪಟ್ಟಣದಲ್ಲಿದೆ (ಧೋಲಾವಿರಾ
ಮೂರು ವಿಭಿನ್ನ
ವಲಯಗಳನ್ನು ಹೊಂದಿತ್ತು,
ಇತರ ನಗರಗಳಲ್ಲಿರುವಂತೆ
ಎರಡು ಅಲ್ಲ). ಅಲ್ಲದೆ,
ಈ ನಗರದಲ್ಲಿನ, ಹೆಚ್ಚಿನ
ಕಟ್ಟಡಗಳ ಅಡಿಪಾಯವನ್ನು
ಕಲ್ಲುಗಳಿಂದ
ನಿರ್ಮಿಸಲಾಗಿದೆ.



© NCERT not to be republished

ಕೋಳದ ಸುತ್ತಲೂ ಸಣ್ಣ ಕೋಣೆಗಳಿಂದ ಸುತ್ತುವರೆದಿತ್ತು, ಅವುಗಳಲ್ಲಿ ಒಂದು ಬಾವಿಯನ್ನು ಹೊಂದಿತ್ತು; ಕಾಲಕಾಲಕ್ಕೆ ಅದನ್ನು ಖಾಲಿ ಮಾಡಲು ಮತ್ತು ಸಿಹಿನೀರಿನಿಂದ ಮರುಪೂರಣ ಮಾಡಲು ಕೊಳದ/ಟ್ಯಾಂಕ್‌ನ ಒಂದು ಮೂಲೆಯಲ್ಲಿ ಚರಂಡಿ ಇತ್ತು.



ಚಿತ್ರ ೬.೬. ಮೊಹೆಂಜೊ-ದಾರೋದ ಬೃಹತ ಕೊಳ/ಗ್ರೇಟ್ ಬಾತ್

ಅಂತಹ ರಚನೆಯ ಉದ್ದೇಶವೇನು? ಪುರಾತತ್ವಶಾಸ್ತ್ರಜ್ಞರು ಹಲವಾರು ಸಂಭಾವ್ಯ ಅಭಿಪ್ರಾಯಗಳನ್ನು ಪ್ರಸ್ತಾಪಿಸಿದ್ದಾರೆ - ಜನರಿಗೆ ಸಾರ್ವಜನಿಕ ಸ್ನಾನ; ರಾಜಮನೆತನಕ್ಕೆ ಮಾತ್ರ ಸ್ನಾನ; ಅಥವಾ ಧಾರ್ಮಿಕ ಆಚರಣೆಗಳಿಗೆ ಬಳಸುವ ಕೊಳ. ಮೊದಲ ಅಭಿಪ್ರಾಯಗಳನ್ನು ಈಗ ತಳ್ಳಿಹಾಕಲಾಗಿದೆ ಏಕೆಂದರೆ ಈ ನಗರದಲ್ಲಿ, ಹೆಚ್ಚಿನ ಮನೆಗಳು ವೈಯಕ್ತಿಕ ಸ್ನಾನಗೃಹಗಳನ್ನು ಹೊಂದಿದ್ದವು.

ನಾವೀಗ ಅನ್ವೇಷಿಸೋಣ

ಕೊನೆಯ ಎರಡು ಪುರಾತತ್ವಶಾಸ್ತ್ರಜ್ಞರ ಅಭಿಪ್ರಾಯದ ಬಗ್ಗೆ ತರಗತಿಯಲ್ಲಿ ಚರ್ಚೆ ನಡೆಸಿ. ನೀವು ಬೇರೆ ಯಾವುದಾದರೂ ಹೊಸ ವಿಷಯದ ಬಗ್ಗೆ ಯೋಚಿಸಬಹುದೇ? ಈ ಸಂದರ್ಭದಲ್ಲಿ ನಮಗೆ ಇತಿಹಾಸದ ಬೇರೆ ಯಾವುದೇ ಮೂಲವಿಲ್ಲ ಎಂಬುದನ್ನು ನೆನಪಿಡಬೇಕು. ಯಾವುದೇ ಶಾಸನ, ಪಠ್ಯ, ಪ್ರವಾಸಿಗರ ದಾಖಲೆಗಳು ನಮಗೆ ಲಭ್ಯವಿಲ್ಲ.

© NCERT not to be republished

ನೀರಿನ ನಿರ್ವಹಣೆ:

ಹರಪ್ಪ ಜನರು ನೀರಿನ ನಿರ್ವಹಣೆ, ಮತ್ತು ನೈರ್ಮಲ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದರು. ಅವರು ಮನೆಗಳಲ್ಲಿ ಸ್ನಾನ ಮಾಡಲು ಪ್ರತ್ಯೇಕ ಕೊಠಡಿಗಳನ್ನು ಹೊಂದಿದ್ದರು. ಅವುಗಳನ್ನು ದೊಡ್ಡ ಚರಂಡಿಗಳ ರಚನೆಗೆ ಸಂಪರ್ಕಿಸಲಾಗುತ್ತಿತ್ತು.(ಚಿತ್ರ ೬.೭) ಸಾಮಾನ್ಯವಾಗಿ ಅವು ರಸ್ತೆಗಳ ಕೆಳಗೆ ಅಳವಡಿರುರುವ ಕೊಳವೆಗಳ ಮೂಲಕ ತ್ಯಾಜ್ಯ ನೀರನ್ನು ನಗರದ ಹೊರಗೆ ಹಾಕುತ್ತಿದ್ದವು.



ಚಿತ್ರ ೬.೭. ಲೋಥಾಲ್ (ಗುಜರಾತ್) ನಲ್ಲಿನ ಒಳಚರಂಡಿ ವ್ಯವಸ್ಥೆ

ಮೊಹೆಂಜೊದಾರೊದಲ್ಲಿ ಇಟ್ಟಿಗೆಗಳಿಂದ ಮಾಡಿದ ೯೪ ಬಾವಿಗಳಿಂದ ಜನರು ನೀರನ್ನು ಮೇಲಕ್ಕೆ ಎಳೆಯುತಿದ್ದರು. ಆದರೆ ಇತರ ಪ್ರದೇಶಗಳಲ್ಲಿ

ಕೊಳಗಳು, ಹತ್ತಿರದ ತೊರೆಗಳು ಅಥವಾ ಮಾನವ ನಿರ್ಮಿತ ಜಲಾಶಯಗಳಿಂದ ನೀರೆತ್ತುವುದು ಮಾಡಲಾಗುತ್ತಿತ್ತು. ಧೋಲಾವಿರಾ (ಗುಜರಾತಿನ ರಾನ್ ಆಫ್ ಕಚ್‌ನಲ್ಲಿ) ದಲ್ಲಿನ ಅತಿದೊಡ್ಡ ಜಲಾಶಯವು ೭೩ ಮೀಟರ್ ಉದ್ದದ ಅಳತೆಯನ್ನು ಹೊಂದಿದೆ!

ಜಲಾಶಯ: ನೀರನ್ನು ಸಂಗ್ರಹಿಸುವ ದೊಡ್ಡ ನೈಸರ್ಗಿಕ ಅಥವಾ ಕೃತಕ ಸ್ಥಳ.

ನಾವೀಗ ಅನ್ವೇಷಿಸೋಣ

ತರಗತಿಯ ಚಟುವಟಿಕೆಯಾಗಿ, ಯಾವುದೇ ಅಳತೆ ಟೇಪ್ ಸಹಾಯದಿಂದ ನಿಮ್ಮ ತರಗತಿಯ ಉದ್ದ, ಶಾಲಾ ಪಾದಾಚಾರಿ ರಸ್ತೆ ಅಥವಾ ಆಟದ ಮೈದಾನವನ್ನು ಅಳೆಯಿರಿ. ಈ ಉದ್ದವನ್ನು ಧೋಲಾವಿರಾದ ಅತಿದೊಡ್ಡ ಜಲಾಶಯದ ಉದ್ದದೊಂದಿಗೆ ಹೋಲಿಸಿ ನೋಡಿ.

ಧೋಲಾವಿರಾದಲ್ಲಿ, ಕನಿಷ್ಠ ಆರು ದೊಡ್ಡ ಜಲಾಶಯಗಳನ್ನು ಕಲ್ಲುಗಳಿಂದ ನಿರ್ಮಿಸಲಾಗಿದೆ ಅಥವಾ ಬಂಡೆಗೆ ಕತ್ತರಿಸಲಾಗಿದೆ (ಚಿತ್ರ ೬.೮). ಅವುಗಳಲ್ಲಿ ಹೆಚ್ಚಿನವುಗಳನ್ನು ಪರಿಣಾಮಕಾರಿಯಾದ ನೀರು ಕೊಯ್ಲು ಮತ್ತು ವಿತರಣೆಗಾಗಿ ಭೂಗತ ಚರಂಡಿಗಳ ಮೂಲಕ ಸಂಪರ್ಕಿಸಲಾಗಿದೆ.



ಚಿತ್ರ ೬.೮. ಧೋಲಾವಿರಾದಲ್ಲಿ ಬಂಡೆಯಲ್ಲಿ ಕತ್ತರಿಸಿದ ಒಂದು ದೊಡ್ಡ ಜಲಾಶಯ, ೭೩ ಮೀಟರ್ ಉದ್ದವಿದೆ

© NCERT not to be republished

ಅದರ ಕುರಿತು ಆಲೋಚಿಸಿ

ಅಂತಹ ಜಲಾಶಯಗಳ ಸಮೂಹವನ್ನು ನಿರ್ಮಿಸಲು ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಬೇಕಾಗುತ್ತಾರೆ ಎಂದು ಊಹಿಸಿ. ಯಾರು ಅವರ ಕೆಲಸವನ್ನು ಸಂಘಟಿಸಿದರು ಮತ್ತು ಅವರಿಗೆ ನಿಖರವಾದ ಸೂಚನೆಗಳನ್ನು ನೀಡಿದರು ಎಂದು ನೀವು ಭಾವಿಸುತ್ತೀರಿ? ಅವರ ದುಡಿಮೆಗೆ ಅವರಿಗೆ ಹೇಗೆ ಸಂಬಳ ನೀಡಲಾಯಿತು ಎಂದು ನೀವು ಭಾವಿಸುತ್ತೀರಿ? (ಸೂಚನೆ: ಆ ಸಮಯದಲ್ಲಿ ನಮ್ಮಲ್ಲಿ ಈಗಿರುವಂತೆ ಹಣವಿರಲಿಲ್ಲ.) ಜಲಾಶಯಗಳನ್ನು ಕಾಲಕಾಲಕ್ಕೆ ಸ್ವಚ್ಛಗೊಳಿಸಬೇಕಾಗಿರುವುದರಿಂದ ಅವುಗಳ ನಿರ್ವಹಣೆಯನ್ನು ಮಾಡಲು ಕೆಲವು ಸ್ಥಳೀಯ ಇಲಾಖೆಗಳು ಇದ್ದವೇ? ಈ ನಗರದ ಅಧಿಕಾರಿಗಳು ಮತ್ತು ಪುರಸಭೆಯ ಆಡಳಿತದ ಬಗ್ಗೆ ಈ ಎಲ್ಲದರಿಂದ ನಾವು

ಯಾವ ಸುಳಿವುಗಳನ್ನು ಪಡೆಯುತ್ತೇವೆ? ನಿಮ್ಮ ಕಲ್ಪನೆಯನ್ನು ಬಳಸಿ ಮತ್ತು ನಿಮ್ಮ ಶಿಕ್ಷಕರೊಂದಿಗೆ ಚರ್ಚಿಸಿ. ಪುರಾತತ್ವಶಾಸ್ತ್ರಜ್ಞರು ಸಹ ಈ ಪ್ರಶ್ನೆಗಳನ್ನು ಚರ್ಚಿಸುತ್ತಾರೆ. ಆದರೆ ಯಾವುದೇ ಉತ್ತರಗಳು ಅಂತಿಮವಲ್ಲ.!

ಹರಪ್ಪದಲ್ಲಿ ವಾಸಿಸಿತ್ತಿರುವ ಜನರು ಏನು ತಿನ್ನುತ್ತಿದ್ದರು?

ಹರಪ್ಪದ ಜನರು ತಮ್ಮ ವಸತಿ ಸ್ಥಳಗಳನ್ನು ದೊಡ್ಡ ಅಥವಾ ಸಣ್ಣ ನದಿಗಳ ದಡದಲ್ಲಿ ರಚಿಸಿದರು. ನದಿಗಳು ತಮ್ಮ ಸುತ್ತಲಿನ ಮಣ್ಣನ್ನು ಸಮೃದ್ಧಗೊಳಿಸುವುದರಿಂದ, ನೀರಿನ ಸುಲಭ ಲಭ್ಯತೆಗೆ, ಕೃಷಿಗೂ ಸೂಕ್ತವಾದ ಸ್ಥಳದ ಆಯ್ಕೆಯಾಗಿತ್ತು. ಪುರಾತತ್ವ ಸಂಶೋಧನೆಗಳು ಹರಪ್ಪನ್ನರು ಬೇಳೆಕಾಳುಗಳು ಮತ್ತು ವಿವಿಧ ತರಕಾರಿಗಳ ಜೊತೆಗೆ ಬಾರ್ಲಿ, ಗೋಧಿ, ರಾಗಿ ಮತ್ತು ಕೆಲವೊಮ್ಮೆ ಅಕ್ಕಿಯಂತಹ ಏಕದಳ ಧಾನ್ಯಗಳನ್ನು ಬೆಳೆಯುತ್ತಿದ್ದರು ಎಂದು ಕಂಡುಕೊಂಡಿದ್ದಾರೆ. ಅವರು ಯುರೇಷಿಯಾದಲ್ಲಿ ಹತ್ತಿಯನ್ನು ಬೆಳೆದ ಮೊದಲಿಗರು. ಅದರಿಂದ ಅವರು ಬಟ್ಟೆಗಳಲ್ಲಿ ನೇಯುತ್ತಿದ್ದರು. ಅವರು ನೇಗಿಲು (ಚಿತ್ರ ೬.೯) ಸೇರಿದಂತೆ ಕೃಷಿ ಉಪಕರಣಗಳನ್ನು ತಯಾರಿಸಿದ್ದರು. ಅವುಗಳಲ್ಲಿ ಕೆಲವು ಆಧುನಿಕ ರೈತರು ಬಳಸುವಂತವು ಇದ್ದವು.

ಬೇಳೆಕಾಳುಗಳು: ಬೀನ್ಸ್, ಬಟಾಣಿ ಮತ್ತು ಬೇಳೆಕಾಳುಗಳನ್ನು (ದಾಲ್) ಒಳಗೊಂಡಿರುವ ಬೆಳೆಗಳ ವರ್ಗ.



ಚಿತ್ರ ೬.೯. ನೇಗಿಲಿನ ಸಣ್ಣ ಜೇಡಿಮಣ್ಣಿನ ಮಾದರಿ
(ಹರಿಯಾಣದ ಬಾಣವಾಲಿಯಿಂದ)

© NCERT not to be republished

ಈ ತೀವ್ರವಾದ ಕೃಷಿ ಚಟುವಟಿಕೆಯನ್ನು ನೂರಾರು ಸಣ್ಣ ಗ್ರಾಮೀಣ ಪ್ರದೇಶಗಳು ಅಥವಾ ಹಳ್ಳಿಗಳು ನಿರ್ವಹಿಸುತ್ತಿದ್ದವು. ಈಗಿನಂತೆ, ಗ್ರಾಮೀಣ ಪ್ರದೇಶಗಳಿಂದ ಸಾಕಷ್ಟು ಕೃಷಿ ಉತ್ಪನ್ನಗಳು ಪ್ರತಿದಿನವೂ ಅವರನ್ನು ತಲುಪಿದರೆ ಮಾತ್ರ ನಗರಗಳು ಉಳಿಯಲು ಸಾಧ್ಯ.

ಹರಪ್ಪನ್ನರು ಮಾಂಸ ಸೇವನೆಗಾಗಿ ಹಲವಾರು ಪ್ರಾಣಿಗಳನ್ನು ಸಾಕಿದರು ಮತ್ತು ನದಿಗಳು ಮತ್ತು ಸಮುದ್ರ ಎರಡರಲ್ಲೂ ಮೀನು ಹಿಡಿಯುತ್ತಿದ್ದರು. ಉತ್ಖನನದ ಸಮಯದಲ್ಲಿ ಕಂಡುಬರುವ ಹೆಚ್ಚಿನ ಸಂಖ್ಯೆಯ ಪ್ರಾಣಿ ಮತ್ತು ಮೀನು ಮೂಳೆಗಳಿಂದ ಇರುವುದು ತಿಳಿದುಬಂದಿದೆ.

ಹರಪ್ಪದ ಅಡುಗೆ ಮಡಕೆಗಳಲ್ಲಿ ಏನಿತ್ತು? ಮಣ್ಣಿನ ಮಡಕೆಗಳನ್ನು ವೈಜ್ಞಾನಿಕವಾಗಿ ಪರೀಕ್ಷೆಗಳನ್ನು ಮಾಡಿದ್ದಾಗ ಕೆಲವು ಉತ್ತರಗಳು ಸಿಗುತ್ತವೆ. ಅರಿಶಿನ, ಶುಂಠಿ ಮತ್ತು ಬಾಳೆಹಣ್ಣಿನ ಅವಶೇಷಗಳು ಸಿಗುವುದು ನಿರೀಕ್ಷಿತವು (ಡೈರಿ ಉತ್ಪನ್ನಗಳು) ಆಶ್ಚರ್ಯಕರವಾದದು. ಅವರ ಆಹಾರವು ಸಾಕಷ್ಟು ವೈವಿಧ್ಯಮಯವಾಗಿತ್ತು.

ನಾವೀಗ ಅನ್ವೇಷಿಸೋಣ

ನೀವು ಹರಪ್ಪ ಜನರ ಮನೆಯಲ್ಲಿ ಅಡುಗೆಯನ್ನು ಬೇಯಿಸುತ್ತೀರಿ ಎಂದು ಊಹಿಸಿಕೊಳ್ಳಿ. ಈ ಮೇಲೆ ನೀಡಲಾದ ಮಾಹಿತಿಯ ಆಧಾರದ ಮೇಲೆ ನೀವು ಯಾವ ಅಡುಗೆ ಅಥವಾ ಭಕ್ಷ್ಯಗಳನ್ನು ತಯಾರಿಸುತ್ತೀರಿ?

ಚುರುಕಾದ ವ್ಯಾಪಾರ ವಹಿವಾಟು

ಹರಪ್ಪ ಜನರು ತಮ್ಮ ಸ್ವಂತ ನಾಗರಿಕತೆಯೊಳಗೆ (ಹತ್ತಿರದ ಅಥವಾ ದೂರದ ಇತರ ನಗರಗಳು) ಮಾತ್ರವಲ್ಲದೆ ಭಾರತದ ಒಳಗೆ ಮತ್ತು ಹೊರಗೆ ಇತರ ನಾಗರಿಕತೆ, ಸಂಸ್ಕೃತಿಗಳೊಂದಿಗೆ ಸಕ್ರಿಯ ವ್ಯಾಪಾರದಲ್ಲಿ ತೊಡಗಿದ್ದರು. ಅವರು ಆಭರಣಗಳು, ಮರಮುಟ್ಟುಗಳು, ದೈನಂದಿನ ಬಳಕೆಯ ಕೆಲವು ವಸ್ತುಗಳು (ಚಿತ್ರ ೬.೧೧) ಚಿನ್ನ ಮತ್ತು ಹತ್ತಿ, ಕೆಲವು ಆಹಾರ ಪದಾರ್ಥಗಳನ್ನು ರಫ್ತು ಮಾಡುತ್ತಿದ್ದರು. ಅವರಿಗೆ ಅತ್ಯಂತ ಮೆಚ್ಚಿನ ಆಭರಣಗಳೆಂದರೆ ಸ್ಫಟಿಕದ ಮಣಿಗಳು.(ಪುಟ ೯೮ ರಲ್ಲಿ ಚಿತ್ರ ೬.೧೦) ಇದು ಹೆಚ್ಚಾಗಿ ಗುಜರಾತಿನಲ್ಲಿ ಕಂಡುಬರುವ ಬೆಲೆಬಾಳುವ ಕೆಂಪು ಸ್ಫಟಿಕದ ಕಲ್ಲು. ಅವುಗಳನ್ನು ಕೊರೆಯಲು ಹರಪ್ಪದ ಕುಶಲಕರ್ಮಿಗಳು ವಿಶೇಷ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿದರು. ಅವುಗಳ ಮೂಲಕ ದಾರವು ಹಾದುಹೋಗುವ ಮತ್ತು ಅವುಗಳನ್ನು ವಿವಿಧ ರೀತಿಯಲ್ಲಿ ಅಲಂಕರಿಸಬಹುದಾಗಿತ್ತು. ಅವರು ಶಂಖವನ್ನು ಸುಂದರವಾದ ಚಿಪ್ಪು ಬಳೆಗಳಾಗಿ ಮಾಡಿತ್ತಿದರು. ಚಿಪ್ಪು ಗಟ್ಟಿಯಾದ ವಸ್ತುವಾಗಿರುವುದರಿಂದ ಅದನ್ನು ಆಭರಣವಾಗಿಸಲು ಅತ್ಯಾಧುನಿಕ ತಂತ್ರಗಳು ಬೇಕಾಗಿತ್ತು.

ರಫ್ತು ಮಾಡಿದ ಸರಕುಗಳಿಗೆ ಬದಲಾಗಿ ಹರಪ್ಪನ್ನರು ಏನು ಆಮದು ಮಾಡಿಕೊಂಡರು ಎಂಬುದು ಅಷ್ಟು ಸ್ಪಷ್ಟವಾಗಿಲ್ಲ. ಇದು ಬಹುಶಃ ತಾಮ್ರವನ್ನು ಒಳಗೊಂಡಿತ್ತು, ಏಕೆಂದರೆ ಈ ಲೋಹವು ಸ್ಥಳೀಯವಾಗಿ/ಮನೆಯಲ್ಲಿ ಅಷ್ಟೊಂದು ಸಾಮಾನ್ಯವಾಗಿರಲಿಲ್ಲ.

© NCERT not to be republished

ಇದನ್ನು ತಪ್ಪಿಸಬೇಡಿ

ಹರಪ್ಪನ್ನರು ಮೃದುವಾದ ಲೋಹವಾದ ತಾಮ್ರದ ಕೆಲಸ ಮಾಡುವ ಕಲೆಯನ್ನು ಕರಗತ ಮಾಡಿಕೊಂಡಿದ್ದರು. ತಾಮ್ರಕ್ಕೆ ತವರವನ್ನು ಸೇರಿಸಿದರೆ, ಪರಿಣಾಮವಾಗಿ ಲೋಹವು ಕಂಚಿನದಾಗಿರುತ್ತದೆ, ಇದು ತಾಮ್ರಕ್ಕಿಂತ ಕಠಿಣವಾಗಿರುತ್ತದೆ. ಹರಪ್ಪನ್ನರು ಉಪಕರಣಗಳು, ಮಡಕೆಗಳು ಮತ್ತು ಪಾತ್ರೆಗಳನ್ನು ತಯಾರಿಸಲು ಕಂಚಿನ್ನು ಬಳಸಿದರು, ಮತ್ತು ನಾವು ಮುಂದೆ ನೋಡುವಂತೆ, ಅವರು ಕೆಲವು ಪ್ರತಿಮೆಗಳನ್ನು ತಯಾರಿಸಿದರು.

ಚಿತ್ರ ೬.೧೧. ಹರಪ್ಪನ್ ದಂತ ಬಾಚಣಿಗೆ (ಸುಮಾರು ೭ ಸೆಂ.ಮೀ ಉದ್ದ)
ಒಮಾನ್ ಕರಾವಳಿಯಲ್ಲಿ ಕಂಡುಬಂದಿದೆ

ಅಂತಹ ವ್ಯಾಪಾರವನ್ನು ನಡೆಸಲು ಭೂಮಾರ್ಗ ಮತ್ತು ಹೆಚ್ಚು ದೂರದ ಸ್ಥಳಗಳಿಗೆ ನದಿ, ಸಮುದ್ರವನ್ನು ಬಳಸಿದರು. ಇದು ಭಾರತದ ಮೊದಲ ಸಮುದ್ರ ಮೂಲಕ ನಡೆದ ವ್ಯಾಪಾರ ಚಟುವಟಿಕೆಯಾಗಿದೆ. ವಾಸ್ತವವಾಗಿ ಕೆಲವು ಹರಪ್ಪ ವಸತಿ ನೆಲೆಗಳು ಗುಜರಾತ, ಸಿಂಧ ಕರಾವಳಿ ಪ್ರದೇಶಗಳಲ್ಲಿವೆ. ಗುಜರಾತಿನ ಲೋಥಾಲ್ ಎಂಬ ಬಂಧರು ೨೧೭ ಮೀಟರ್ ಉದ್ದ ಮತ್ತು ೩೬ ಮೀಟರ್ ಅಗಲವನ್ನು ಅಳೆಯುವ ದೊಡ್ಡ ಜಲಾನಯನ ಪ್ರದೇಶವಾಗಿದೆ. ಉದ್ದವು ಎರಡು ಫುಟ್ಬಾಲ್ ಮೈದಾನಗಳಿಗಿಂತ ಸ್ವಲ್ಪ ದೊಡ್ಡದಾಗಿದೆ. ಈ ಜಲಾನಯನ ಪ್ರದೇಶವು ಹಡಗುಕಟ್ಟೆಯಾಗಿರಬೇಕು. ಅಂದರೆ ಸರಕುಗಳನ್ನು ಸಾಗಿಸಲು ದೋಣಿಗಳು ಬರುವುದಕ್ಕೆ ಮತ್ತು ಹೋಗುವುದಕ್ಕೆ ಬಳಸುವ ಉದ್ದೇಶದಿಂದ ರಚನೆಯಾಗಿರಬೇಕು.

ಚಿತ್ರ ೬.೧೦. ಕಾರ್ನೆಲಿಯನ್‌ನ ಹರಪ್ಪನ್ ಮಣಿಗಳು
ಸೂಸಾದಲ್ಲಿ (ಇಂದಿನ ಇರಾನ್) ಉತ್ಖನನ ಮಾಡಿದ ಮಣಿಗಳು

ಅಂತಹ ವಿಸ್ತಾರ ವಹಿವಾಟಿನಲ್ಲಿ ವ್ಯಾಪಾರಿಗಳು ತಮ್ಮ ಸರಕುಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ವ್ಯವಹಾರದ ಪರಸ್ಪರ ಬಳಕೆಗಾಗಿ ಸಾವಿರಾರು ಸಣ್ಣ ಮುದ್ರೆಗಳ ಮುಖ್ಯ ಉದ್ದೇಶಕ್ಕೆ ಬಳಸುತ್ತಿದ್ದರು ಎಂದು ತೋರುತ್ತದೆ. ಈ ಮುದ್ರೆಗಳು ಸಾಮಾನ್ಯವಾಗಿ

© NCERT not to be republished



ಚಿತ್ರ ೬.೧೨. ಲೋಥಾಲ್ ನಲ್ಲಿರುವ ಬೃಹತ್ ಹಡಗುಕಟ್ಟೆ

ಸ್ಟೀಟೈಟ್‌ನಿಂದ ತಯಾರಿಸಲಾಗಿದೆ. ಇದೊಂದು ಬಗೆಯ ಮೃದುವಾದ ಕಲ್ಲು. ಅದನ್ನು ಬಿಸಿಮಾಡುವ ಮೂಲಕ ಗಟ್ಟಿಗೊಳಿಸಲಾಗುತ್ತದೆ. ಅವು ಕೆಲವೇ ಸೆಂಟಿಮೀಟರ್‌ಗಳಷ್ಟು ಮಾತ್ರ ಅಳತೆ ಹೊಂದಿರುತ್ತದೆ. ಸಾಮಾನ್ಯವಾಗಿ ಅವುಗಳ ಮೇಲೆ ಪ್ರಾಣಿಗಳ ಆಕೃತಿಗಳನ್ನು ಕೊರೆಯಲಾಗುತ್ತಿತ್ತು, ಬರವಣಿಗೆ ವ್ಯವಸ್ಥೆಯ ಭಾಗವಾಗಿರುವ ಕೆಲವು ಚಿಹ್ನೆಗಳೊಂದಿಗೆ ಚಿತ್ರದಲ್ಲಿವೆ. ಆದರೆ ಆ ವ್ಯವಸ್ಥೆ ಮತ್ತು ಪ್ರಾಣಿಗಳ ಆಕೃತಿಗಳ ಸಾಂಕೇತಿಕ ಅರ್ಥವನ್ನು ಇನ್ನೂ ಅರ್ಥಮಾಡಿಕೊಳ್ಳಬೇಕಾಗಿದೆ. ಅವು ಹೇಗಾದರೂ ಸರಿ ವ್ಯಾಪಾರ ಚಟುವಟಿಕೆಗಳಿಗೆ ಸಂಬಂಧಿಸಿವೆ ಎನ್ನುವುದಂತು ಸತ್ಯ.



ಚಿತ್ರ ೬.೧೩-೧, ೬.೧೩-೨, ೬.೧೩-೩. (ಎಡದಿಂದ ಬಲಕ್ಕೆ) ಯುನಿಕಾರ್ನ್ ಅನ್ನು ತೋರಿಸುವ ಹರಪ್ಪನ್ ಮುದ್ರೆ; ಗೂಳಿಯನ್ನು ತೋರಿಸುವ ಹರಪ್ಪನ್ ಮುದ್ರೆ; ಕೊಂಬಿನ ಹುಲಿಯನ್ನು ತೋರಿಸುವ ಹರಪ್ಪನ್ ಮುದ್ರೆ

ನಾವೀಗ ಹುಡುಕೋಣ:

ಕೆಲವು ಬರವಣಿಗೆಯ ಚಿಹ್ನೆಯೊಂದಿಗೆ ಇರುವ ಈ ಮೂರು ಹರಪ್ಪ ಮುದ್ರೆಗಳನ್ನು ನೋಡಿದಾಗ, ನಿಮ್ಮ ಮನಸ್ಸಿಗೆ ಏನು ಅನಿಸುತ್ತದೆ? ನೀವು ಯಾವ ಅಭಿಪ್ರಾಯವನ್ನು ಸೂಚಿಸಲು ಬಯಸುವಿರಾ? ನಿಮ್ಮ ಕಲ್ಪನೆಯ ಯೋಚನೆಯನ್ನು ವಿಸ್ತರಿಸಲು ಬಿಡಿ!

© NCERT not to be republished

ಪ್ರಾಚೀನರ ಜನ ಜೀವನ

ಪುರಾತತ್ವಶಾಸ್ತ್ರಜ್ಞರು ಹರಪ್ಪನ್ನರು ತಯಾರಿಸಿದ ಮತ್ತು ಬಳಸಿದ ಅನೇಕ ವಸ್ತುಗಳನ್ನು ಪತ್ತೆ ಮಾಡಿದ್ದಾರೆ.

ದೈನಂದಿನ ವಸ್ತುಗಳು ಬಳಕೆ

ಚಿತ್ರ ೬.೧೪-೧ (ಮೇಲಿನ), ೬.೧೪-೨ (ಬಲ). ಕಂಚಿನ ಕನ್ನಡಿ; ಟೆರಾಕೋಟಾ ಮಡಕೆ (ಎರಡೂ ಧೋಲಾವಿರಾದಿಂದ)

ಚಿತ್ರ ೬.೧೪-೩ (ಮೇಲಿನ), ೬.೧೪-೪ (ಬಲ). ಕೆಲವು ಕಲ್ಲಿನ ತೂಕಗಳು; ಕಂಚಿನ ಉಳಿ (ಎರಡೂ ಧೋಲಾವಿರಾದಿಂದ)

ಚಿತ್ರ ೬.೧೪-೫, ೬.೧೪-೬. ಕಲ್ಲಿನ ಮೇಲೆ ಕೆತ್ತಲಾದ ಆಟದ ಹಲಗೆ, ಸುಮಾರು ೨೫ ಸೆಂ.ಮೀ ಉದ್ದ (ಧೋಲಾವಿರಾದಿಂದ): ಸುಮಾರು ೪ ಸೆಂ.ಮೀ ಉದ್ದದ ಟೆರಾಕೋಟಾ ಶಿಳ್ಳೆ (ರಾಜಸ್ಥಾನದ ಕರಣ್ಪುರದಿಂದ). ಹರಪ್ಪನ್ನರು ವಯಸ್ಕರು ಮತ್ತು ಮಕ್ಕಳನ್ನು ರಂಜಿಸಲು ಅನೇಕ ಆಟಗಳು ಮತ್ತು ಆಟಿಕೆಗಳನ್ನು ವಿನ್ಯಾಸಗೊಳಿಸಿದರು!

© NCERT not to be republished

ಚಿತ್ರ ೬.೧೫-೧, ೬.೧೫-೨, ೬.೧೫-೩. 'ಪುರೋಹಿತ ರಾಜ' ಎಂದು ಕರೆಯಲ್ಪಡುವ ವ್ಯಕ್ತಿಯ ಪ್ರತಿಮೆ (ಈ ವ್ಯಕ್ತಿ ಯಾರೆಂದು ತಿಳಿದಿಲ್ಲವಾದರೂ); ಸ್ವಸ್ತಿಕವನ್ನು ತೋರಿಸುವ ಮುದ್ರೆ; ಶಕ್ತಿಶಾಲಿ ಪ್ರಾಣಿಗಳಿಂದ ಸುತ್ತುವರೆದಿರುವ ಎತ್ತರದ ವೇದಿಕೆಯ ಮೇಲೆ ಕುಳಿತಿರುವ ಮೂರು ಮುಖದ ದೇವತೆಯನ್ನು ಚಿತ್ರಿಸುವ ಮುದ್ರೆ



ಚಿತ್ರ ೬.೧೫-೪, ೬.೧೫-೫, ೬.೧೫-೬. ಮೊಹೆಂಜೊ-ದಾರೊದ ಕಂಚಿನ ಪ್ರತಿಮೆಯಾದ 'ನೃತ್ಯ ಮಾಡುತ್ತಿರುವ ಹುಡುಗಿ' (ಇದು ೧೦.೮ ಸೆಂ.ಮೀ ಎತ್ತರವಿದೆ); 'ನಮಸ್ತೆ'ಯಲ್ಲಿ ಕುಳಿತಿರುವ ಟೆರಾಕೋಟಾ ಪ್ರತಿಮೆ; ಮಡಕೆಯ ಮೇಲಿನ ವಿನ್ಯಾಸವು ಬಾಯಾರಿದ ಕಾಗೆಯ ಕಥೆಯನ್ನು ಹೇಳುವಂತೆ ತೋರುತ್ತದೆ, ಅದು ಮಡಕೆಯ ಕೆಳಭಾಗದಲ್ಲಿ (ಲೋಥಾಲ್ ನಿಂದ) ನೀರು ಕುಡಿಯಲು ಬುದ್ಧಿವಂತ ಮಾರ್ಗವನ್ನು ಕಂಡುಕೊಳ್ಳುತ್ತದೆ.

© NCERT not to be republished

ಅದರ ಬಗ್ಗೆ ಯೋಚಿಸಿ

- ೧೦೦ ಮತ್ತು ೧೦೧ ಪುಟಗಳಲ್ಲಿನ ವಸ್ತುಗಳು ಈ ಅಥವಾ ಅಧ್ಯಾಯದಲ್ಲಿನ ಯಾವುದನ್ನು ನೀವು ಕಂಡುಹಿಡಿಯಬಹುದು. ಅವರ ಜೀವನದ ಯಾವ ಮುಖ್ಯ ಅಂಶಗಳನ್ನು ನಾವು ಅನುಸರಿಬಹುದಾಗಿದೆ.

ನಾವೀಗ ಅನ್ವೇಷಿಸೋಣ

→ ಲೋಥಾಲ್ ಮಡಕೆಯ ಮೇಲೆ ಬಿಡಿಸಲಾಗಿರುವ ಕಥೆಯು ೪,೦೦೦ ವರ್ಷಗಳಿಗಿಂತಲೂ ಹೆಚ್ಚು ಕಾಲದವರೆಗೆ ಹೇಗೆ ನೆನಪಿನಲ್ಲಿ ಉಳಿಯಿದು ಬಂದಿದೆ.? ಅಂತಹ ಕಥೆಯನ್ನು ಪೂರ್ಣಗೊಳಿಸಿ, ನಿಮ್ಮ ಅಭಿಪ್ರಾಯ ತಿಳಿಸಿ?

→ 'ನೃತ್ಯಮಾಡುವ ಮಹಿಳೆಯ' ಪ್ರತಿಮೆಯನ್ನು ಗಮನಿಸಿರಿ. ಪ್ರತಿಮೆಯು ವ್ಯಕ್ತಪಡಿಸುವ ಭಾವದ ಬಗ್ಗೆ ನಿಮ್ಮ ಅಭಿಪ್ರಾಯವೇನು? ಅವಳ ಬಳೆಗಳು ಇಡೀ ತೋಳನ್ನು ಆವರಿಸಿರುವುದನ್ನು ಗಮನಿಸಿ. ಈ ಅಭ್ಯಾಸವು ಗುಜರಾತ್ ಮತ್ತು ರಾಜಸ್ಥಾನದ ಕೆಲವು ಭಾಗಗಳಲ್ಲಿ ಇನ್ನೂ ಗೋಚರಿಸುತ್ತದೆ. ಈ ಅಧ್ಯಾಯದಲ್ಲಿ ಈ ರೀತಿ ಧರಿಸುವ ಬಳೆಗಳನ್ನು ನೀವು ಬೇರೆಲ್ಲಾದರೂ ಕಾಣಬಹುದೆ?. ಇದರಿಂದ ನಾವು ಯಾವ ತೀರ್ಮಾನಕ್ಕೆ ಬರಬಹುದು?

ಅಂತ್ಯವೋ ಅಥವಾ ಹೊಸ ಆರಂಭವೋ?

ಈ ಸಿಂಧೂ-ಸರಸ್ವತಿ ನಾಗರಿಕತೆ ಅದರ ಎಲ್ಲಾ ಸಾಧನೆಗಳ ಹೊರತಾಗಿಯೂ ಕ್ರಿ.ಪೂ ೧೯೦೦ ರ ಸುಮಾರಿಗೆ ಅದರ ಭೌತಿಕ ರಚನೆಗಳು ಕುಸಿಯಲು ಆರಂಭಿಸಿದವು. ನಗರಗಳು ಒಂದೊಂದಾಗಿ ಕಣ್ಮರೆಯಾದವು. ಅಲ್ಲಿನ ಯಾವುದೇ ನಿವಾಸಿಗಳು ಉಳಿದರೂ ಬದಲಾದ ಪರಿಸರದಲ್ಲಿ ಗ್ರಾಮೀಣ ಜೀವನಶೈಲಿಯನ್ನು ಅಳವಡಿಸಿಕೊಂಡರು. ಹಿಂದಿನ ಸರ್ಕಾರ ಅಥವಾ ಆಡಳಿತವು ಮುಂದೆ ಅಸ್ತಿತ್ವದಲ್ಲಿ ಇರಲಿಲ್ಲ ಎಂದು ತೋರುತ್ತದೆ. ಕ್ರಮೇಣ ಹರಪ್ಪ ಜನರು ನೂರಾರು, ಸಾವಿರಾರು ಅಲ್ಲದಿದ್ದರೂ, ಸಣ್ಣ ಗ್ರಾಮೀಣ ವಸತಿ ಸ್ಥಳಗಳಾಗಿ ಚದುರಿ ಹೋದರು.

ಅದರ ಬಗ್ಗೆ ಆಲೋಚಿಸಿ

ಹರಪ್ಪ ಜನರು ಗ್ರಾಮೀಣ ನೆಲೆಗಳಿಗೆ ಮರಳಿದರು. ಏಕೆಂದರೆ ನಗರ ಜೀವನಶೈಲಿಗಿಂತ ಗ್ರಾಮೀಣ ಜೀವನಶೈಲಿ ಆಹಾರ ಮತ್ತು ನೀರನ್ನು ಸುಲಭವಾಗಿ ಲಭ್ಯವಾಗುತ್ತಿದ್ದವು. ಆಗ ಈಗಿನಂತೆ ಆಹಾರವನ್ನು ಒದಗಿಸಲು ಮತ್ತು ಕೆಲವೊಮ್ಮೆ ನೀರನ್ನು ಒದಗಿಸಲು ನಗರಗಳು ಹಳ್ಳಿಗಳನ್ನು ಅವಲಂಬಿಸಿದ್ದವು.

© NCERT not to be republished

ಈ ಹರಪ್ಪ ನಾಗರಿಕತೆ ಅವನತಿಗೆ ಕಾರಣವೇನು? ಪುರಾತತ್ವಶಾಸ್ತ್ರಜ್ಞರು ಅನೇಕ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. ಬಹಳ ಹಿಂದೆ ಬಾಹ್ಯ ಯುದ್ಧ ಅಥವಾ ಆಕ್ರಮಣಗಳು ನಗರಗಳನ್ನು ನಾಶಪಡಿಸಿರಬಹುದು ಎಂದು ಭಾವಿಸಲಾಗಿತ್ತು. ಆದರೆ ಅಲ್ಲಿ ಯುದ್ಧ ಅಥವಾ ಆಕ್ರಮಣದ ಯಾವುದೇ ಕುರುಹು ಇಲ್ಲ. ವಾಸ್ತವವಾಗಿ ಹರಪ್ಪನ್ನರು ಯಾವುದೇ ಸೈನ್ಯ ಅಥವಾ ಯುದ್ಧ ಶಸ್ತ್ರಾಸ್ತ್ರಗಳನ್ನು ಹೊಂದಿರುವಂತೆ ಕಾಣುವುದಿಲ್ಲ. ಲಭ್ಯ ದಾಖಲೆಗಳ ಪ್ರಕಾರ ಇದು ಶಾಂತಿಯುತ ನಾಗರಿಕತೆ ಎಂದು ತೋರುತ್ತದೆ

ಪ್ರಸ್ತುತ ಎರಡು ಅಂಶಗಳನ್ನು ಒಪ್ಪಲಾಗಿದೆ. ಮೊದಲನೆಯದು- ಕ್ರಿ.ಪೂ ೨೨೦೦ ರಿಂದ ವಿಶ್ವದ ಹೆಚ್ಚಿನ ಭಾಗಗಳ ಮೇಲೆ ಬೀರಿದ ಹವಾಮಾನ ಬದಲಾವಣೆ ಪರಿಣಾಮ, ಕಡಿಮೆ ಮಳೆ ಮತ್ತು ಶುಷ್ಕ ವಾತಾವರಣ ಅವನತಿಯ ಹಂತಕ್ಕೆ ಕಾರಣವಾಯಿತು. ಇದು ಕೃಷಿಯನ್ನು ಹೆಚ್ಚು ಕಷ್ಟಕರವಾಗಿಸಿತು. ನಗರಗಳಿಗೆ ಆಹಾರ ಸರಬರಾಜನ್ನು ಕಡಿಮೆ ಮಾಡಿತು. ಎರಡನೆಯದಾಗಿ, ಸರಸ್ವತಿ ನದಿಯು ಅದರ ಜಲಮೂಲ ಉಗಮ ಪ್ರದೇಶದಲ್ಲಿ ಒಣಗಿಹೋಯಿತು. ಕಾಲಿಬಂಗನ್ ಅಥವಾ ಬನವಾಲಿಯಂತಹ ನಗರಗಳು ಇದ್ದಕ್ಕಿದ್ದಂತೆ ಕಣ್ಮರೆಯಾದವು. ನಮ್ಮ ಅನುಕೂಲಕ್ಕಾಗಿ ನಾವು ಹವಾಮಾನ ಮತ್ತು ಪರಿಸರವನ್ನು ಎಷ್ಟು ಅವಲಂಬಿಸಿದ್ದೇವೆ ಎಂಬುವುದು ಅದರಿಂದ ನಾವು ನೆನಪಿಡಬೇಕಿದೆ.

ನಗರಗಳು ಕಣ್ಮರೆಯಾದರೂ, ಹರಪ್ಪ ಸಂಸ್ಕೃತಿ ಮತ್ತು ತಂತ್ರಜ್ಞಾನದ ಹೆಚ್ಚಿನ ಭಾಗವು ಅವಶೇಷ ರೂಪದಲ್ಲಿ ಉಳಿದುಕೊಂಡಿದೆ. ಭಾರತೀಯ ನಾಗರಿಕತೆಯ ಮುಂದಿನ ಹಂತಕ್ಕೆ ತಗೆದುಕೊಂಡು ಬಂದಿದೆ. ಇದನ್ನು ನಾವು ಮುಂದಿನ ಅಧ್ಯಾಯದಲ್ಲಿ ನೋಡುತ್ತೇವೆ.

ನಾವು ಮುಂದುವರಿಯುವ ಮೊದಲು ...

- ಸಿಂಧೂ, ಹರಪ್ಪ ಅಥವಾ ಸಿಂಧೂ-ಸರಸ್ವತಿ ನಾಗರಿಕತೆಯು ವಿಶ್ವದ ಅತ್ಯಂತ ಹಳೆಯ ನಾಗರಿಕತೆಗಳಲ್ಲಿ ಒಂದಾಗಿದೆ. ಅದರ ನಿವಾಸಿಗಳಾದ ಹರಪ್ಪ ಜನರು ಸಮರ್ಥ ನೀರಿನ ನಿರ್ವಹಣೆ, ವೈವಿಧ್ಯಮಯ ಕರಕುಶಲತೆ ಮತ್ತು ಚುರುಕಾದ ವ್ಯಾಪಾರದೊಂದಿಗೆ ಯೋಜಿತ ನಗರಗಳನ್ನು ರಚಿಸಿದರು.
- ಉತ್ಪಾದಕ ಕೃಷಿಯು ನಗರಗಳಿಗೆ ವಿವಿಧ ಬೆಳೆಗಳನ್ನು ತಂದಿತು.
- ನಾಗರಿಕತೆಯು ಅಂತಿಮವಾಗಿ ಅವನತಿ ಹೊಂದಿತು, ಬಹುಶಃ ಹವಾಮಾನ ಮತ್ತು ಪರಿಸರ ಬದಲಾವಣೆಗಳಿಂದಾಗಿ; ಜನರು ಗ್ರಾಮೀಣ ಜೀವನಶೈಲಿಗೆ ಮರಳಿದರು.

© NCERT not to be republished

ಪ್ರಶ್ನೆಗಳು, ಚಟುವಟಿಕೆಗಳು ಮತ್ತು ಯೋಜನೆಗಳು

೧. ಈ ಅಧ್ಯಾಯದಲ್ಲಿ ಅಧ್ಯಯನ ಮಾಡಿದ ನಾಗರಿಕತೆಗೆ ಹಲವಾರು ಹೆಸರುಗಳು ಏಕೆ ಇವೆ? ಅವುಗಳ ಮಹತ್ವವನ್ನು ಚರ್ಚಿಸಿ.

೨. ಸಿಂಧೂ-ಸರಸ್ವತಿ ನಾಗರಿಕತೆಯ ಕೆಲವು ಸಾಧನೆಗಳನ್ನು ಸಂಕ್ಷಿಪ್ತವಾಗಿ (೧೫೦ ರಿಂದ ೨೦೦ ಪದಗಳು) ಸಂಕ್ಷಿಪ್ತ ವರದಿಯನ್ನು ಬರೆಯಿರಿ.

೩. ನೀವು ಹರಪ್ಪ ನಗರದಿಂದ ಕಾಲಿಬಂಗನ್‌ಗೆ ಪ್ರಯಾಣಿಸಬೇಕು ಎಂದು ಊಹಿಸಿಕೊಳ್ಳಿ. ನಿಮ್ಮ ವಿಭಿನ್ನ ಆಯ್ಕೆಗಳು ಯಾವುವು? ಪ್ರತಿಯೊಂದು ಆಯ್ಕೆಯು ತೆಗೆದುಕೊಳ್ಳುವ ಸಮಯದ ಸ್ಥೂಲ ಅಂದಾಜು ಮಾಡಬಹುದೇ?

೪. ಇಂದಿನ ಭಾರತದಲ್ಲಿ ಹರಪ್ಪದ ಪುರುಷ ಅಥವಾ ಮಹಿಳೆಯನ್ನು ಸರಾಸರಿ ಅಡುಗೆ ಮನೆಗೆ ಸಾಗಿಸಲಾಗುತ್ತದೆ ಎಂದು ಊಹಿಸೋಣ. ಅವರಿಗಾಗಿ ಕಾಯುತ್ತಿರುವ ನಾಲ್ಕು ಅಥವಾ ಐದು ದೊಡ್ಡ ಆಶ್ಚರ್ಯಗಳು ಯಾವುವು?

೫. ಈ ಅಧ್ಯಾಯದಲ್ಲಿನ ಎಲ್ಲಾ ಚಿತ್ರಗಳನ್ನು ನೋಡಿ, ನಮ್ಮ ೨೧ ನೇ ಶತಮಾನದಲ್ಲಿ ಇನ್ನೂ ಪರಿಚಿತವಾಗಿರುವ ಆಭರಣಗಳ / ಚಿಹ್ನೆಗಳ / ವಸ್ತುಗಳ ಪಟ್ಟಿಯನ್ನು ಮಾಡಿ.

೬. ಧೋಲಾವಿರಾದಲ್ಲಿನ ಜಲಾಶಯಗಳ ವ್ಯವಸ್ಥೆಯು ಯಾವ ಮನಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ?

೭. ಮೊಹೆಂಜೊದಾರೊದಲ್ಲಿ ಇಟ್ಟಿಗೆಗಳಿಂದ ನಿರ್ಮಿಸಲಾದ ಸುಮಾರು ೭೦೦ ಬಾವಿಗಳನ್ನು ಎಣಿಸಲಾಗಿದೆ. ಅವುಗಳನ್ನು ಹಲವಾರು ಶತಮಾನಗಳಿಂದ ನಿಯಮಿತವಾಗಿ ನಿರ್ವಹಿಸಲಾಗಿದೆ ಮತ್ತು ಬಳಸಲಾಗುತ್ತಿದೆ ಎಂದು ತೋರುತ್ತದೆ. ಇದರ ಪರಿಣಾಮಗಳನ್ನು ಚರ್ಚಿಸಿ.

೮. ಹರಪ್ಪ ಜನರು ಉನ್ನತ ನಾಗರಿಕ ಪ್ರಜ್ಞೆಯನ್ನು ಹೊಂದಿದ್ದರು ಎಂದು ಆಗಾಗ್ಗೆ ಹೇಳಲಾಗುತ್ತದೆ. ಈ ಹೇಳಿಕೆಯ ಮಹತ್ವವನ್ನು ಚರ್ಚಿಸಿ. ನೀವು ಅದನ್ನು ಒಪ್ಪುತ್ತೀರಾ? ಇಂದಿನ ಭಾರತದ ದೊಡ್ಡ ನಗರದ ನಾಗರಿಕರೊಂದಿಗೆ ಹೋಲಿಸಿ.

© NCERT not to be republished